- -                    ಅಸಲು ದಾವೆ ಸಂ: **55/2022** ಪಿ .ಡಬ್ಲು-**3**

**ದಿ: 04-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: 1ನೇ ಪ್ರತಿವಾದಿ ಪರವಾಗಿ ಶ್ರೀ ಜಿ.ಪಿ. ವಕೀಲರಿಂದ:**

**ವಾಟೀಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

**ವಾಟೀಸವಾಲು: 2 ಮತ್ತು 3ನೇ ಪ್ರತಿವಾದಿಗಳ ಪರವಾಗಿ ಶ್ರೀ ಬಿ.ಹೆಚ್. ವಕೀಲರಿಂದ:**

1. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಕನ್ನಡ ಭಾಷೆಯಲ್ಲಿ ಹೇಳಿರುರತ್ತೇನೆ ಅವರು ಇಂಗ್ಲೀಷ್ ಭಾಷೆಯಲ್ಲಿ ಬರೆದಿದ್ದಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನು ಸಹಿಯನ್ನು ಊರಿನಲ್ಲಿ ಮಾಡಿರುತ್ತೇನೆ. ನಾನೇ ಸಹಿ ಮಾಡಿ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ವಿಷಯ ಬರೆದಿದ್ದಾರೆಂದು ನನಗೆ ಓದಿ ಹೇಳಿರುತ್ತಾರೆ. ವಾದಿ ನಂಬರ್-1 ನನಗೆ ಸೊಸೆಯಾಗಬೇಕು. ಪ್ರತಿವಾದಿ -1 ರವರು ನನಗೆ ಅಕ್ಕ ಆಗಬೇಕು.

ನನ್ನ ಸಾಕ್ಷಿ ಪ್ರಮಾಣ ಪತ್ರಗಳಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುತ್ತದೆ. ಚಿಂಚೋಡಿ ಗ್ರಾಮದಲ್ಲಿರುವ ದಾವಾ ಹೊಲದ ಸರ್ವೆ ನಂಬರ್ 73 ರಲ್ಲಿ ಭಾಗ ಆಗಬೇಕೆಂದು ಸಲ್ಲಿಸಿರುತ್ತಾರೆ. ಸರ್ವೆ ನಂಬರ್ 73 ಇದರ ಚಕ್ ಬಂದಿ, ಪೂರ್ವಕ್ಕೆ - ಅಲ್ಲಿಸಾಬ ಇವರ ಹೊಲ ಬರುತ್ತದೆ, ಪಶ್ಚಿಮನಕ್ಕೆ ಮಲ್ಲಪ್ಪ ಮತ್ತು ದುರಗಪ್ಪ ಇವರ ಹೊಲ ಬರುತ್ತದೆ, ಉತ್ತರಕ್ಕೆ ತಿಮ್ಮಪ್ಪ ಬಡಿಗೇರ ಇವರ ಹೊಲ ಬರುತ್ತದೆ, ದಕ್ಷಿಣ ದಿಕ್ಕಿಗೆ ಹಂಪಪ್ಪ ಕಂಪೂರ ಇವರ ಜಮೀನು ಇರುತ್ತದೆ. ಸರ್ವೆ ನಂಬರ್ 73 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ ಆದರೆ 2-00 ಎಕರೆ ಜಮೀನು ಇರುತ್ತದೆ. ಸದರಿ ಜಮೀನು ಇನಾಂ ಜಮೀನು ಆಗಿರುತ್ತದೆ. ಸದರಿ ಜಮೀನು ನಾಗಪ್ಪನಿಗೆ ಸುಮಾರು 30 ವರ್ಷಗಳ ಹಿಂದೆ ಬಂದಿರುತ್ತದೆ. ನಾಗಪ್ಪನಿಗೆ ಇನಾಂ ಭೂಮಿ ಆಗಿರುತ್ತದೆ ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನಾನು ಪಕ್ಕದ ಹೊಲದವನಾಗಿರುವುದರಿಂದ ನನಗೆ ಗೊತ್ತಿರುತ್ತದೆ ಎನ್ನುತ್ತಾರೆ. ದಾವಾ ಜಮೀನು ಪಕ್ಕದಲ್ಲಿ ತಿಮ್ಮಪ್ಪ, ಮಲ್ಲಪ್ಪ ಮತ್ತು ನಾಗಪ್ಪನ ಹೊಲಗಳು ಇರುತ್ತವೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ್ 73 ರ ಜಮೀನು ನಾಗಪ್ಪನಿಗೆ ಇನಾಂ ಜಮೀನು ಆಗಿ ಕೊಟ್ಟಿರುತ್ತಾರೆ ಎಂದು ಹೇಳಿ ಬರೆಸಿದ್ದೇನೆ. ಆ ರೀತಿ ನೀವು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ